KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 23-09-2024**
**ಚಾ.ಸಾ-19**
**ಪ್ರಾ.ಸಾ-11**

| | |
|---|---|
| ಹೆಸರು | ಮಾರುತಿ |
| ತಂದೆ ಹೆಸರು | ಗಿರಿಯಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಚಿಕ್ಕಮಗಳೂರು |
| ವಾಸಸ್ಥಳ | ಚಿಕ್ಕಮಗಳೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು 2016 ನವೆಂಬರ್ ನಿಂದ 2019 ಮೇ ವರೆಗೂ ತುರುವೇಕೆರೆಯ ಬೆಸ್ಕಾಂ ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕ 01.04.2019 ರಂದು ತುರುವೇಕೆರೆ ಪೊಲೀಸ್ ಠಾಣೆಯಿಂದ ದಿನಾಂಕ 16.02.2019 ರಂದು ಸಂಜೆ 8.30 ಗಂಟೆಯಿಂದ 9.30 ಗಂಟೆಯವರೆಗೂ ತಂಡಗ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇತ್ತೇ ಎಂದು ಮಾಹಿತಿಯನ್ನು ಕೇಳಿದ್ರು. ಹಾಗಾಗಿ ನಾನು ಸಂಬಂಧ ಪಟ್ಟ ಲಾಗ್ ಪುಸ್ತಕವನ್ನು ತಂಡಗ ಗ್ರಾಮದ ಉಪಸ್ತಾವರದಿಂದ ತರಿಸಿ ಪರಿಶೀಲಿಸಲಾಗಿ ಮೇಲೆ ಹೇಳಿದ ದಿನಾಂಕ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ತಂಡಗ ಗ್ರಾಮಕ್ಕೆ ಮಾಡಲಾಗಿತ್ತು. ಆದ್ದರಿಂದ ಅದೇ ರೀತಿ ಮಾಹಿತಿಯನ್ನು ನಾನು ತುರುವೇಕೆರೆ ಪಿಐ ರವರಿಗೆ ಕೊಟ್ಟಿದ್ದೇನೆ. ದಿನಾಂಕ 04.04.2019 ರಂದು ನಾನು ಈ ಮಾಹಿತಿಯನ್ನು ಒದಗಿಸಿರುತ್ತೇನೆ. ನನ್ನ ಮಾಹಿತಿಗೆ ಉಪಸ್ತಾವರದ ಲಾಗ್ ಪುಸ್ತಕದ ಸಂಬಂಧ ಪಟ್ಟ ಮಾಹಿತಿಯ ಪುಟದ ಪ್ರತಿಯನ್ನು ಮತ್ತು ಶಾಖಾಧಿಕಾರಿಯವರ ವರದಿಯನ್ನು ಲಗತ್ತಿಸಿರುತ್ತೇನೆ. ಇದು ನಾನು ಕೊಟ್ಟ ವರದಿ.

(ಸಾಕ್ಷಿ ಗುರುತಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. (ಸಾಕ್ಷಿ ಗುರುತಿಸಿದ್ದು ನಿಪಿ-6(ಎ) ಎಂದು ಗುರುತಿಸಲಾಯಿತು). ಇದು ಶಾಖಾಧಿಕಾರಿಯವರ ವರದಿ. (ಸಾಕ್ಷಿ ಗುರುತಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು). ಇದು ಲಾಗ್ ಪುಸ್ತಕದ ನಕಲು. (ಸಾಕ್ಷಿ ಗುರುತಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. (ಸಾಕ್ಷಿ ಗುರುತಿಸಿದ್ದು ನಿಪಿ-8(ಎ) ಎಂದು ಗುರುತಿಸಲಾಯಿತು). ತಂಡಗ ಗ್ರಾಮಕ್ಕೆ ನಾನು ಮೇಲೆ ಹೇಳಿದ ಸಂದರ್ಭದಲ್ಲಿ 11 ಕೆವಿ ವಿದ್ಯುತ್ ನ್ನು ಸರಬರಾಜು ಮಾಡಿದ್ದು ಅದರ ಮಧ್ಯೆ ಅಡಚಣೆ ಇರಲಿಲ್ಲ.

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**